# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ 02/07/2022 ರಂದು ನಡೆದ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ವಾರ್ಡ್ 77 ದತ್ತಾತ್ರೇಯ ದೇವಸ್ಥಾನದ ಸಭೆಯ ನಡವಳಿಗಳು

ಸಭೆಯನ್ನು ಪ್ರಾರಂಭಿಸುತ್ತಾ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರಿಗೆ ನೋಡಲ್ ಅಧಿಕಾರಿಗಳು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು. ಈ ಕೆಳಕಂಡಂತೆ ಚರ್ಚಿಸಿ ನಿರ್ಣಯಿಸಲಾಯಿತು.

1. ಹಾಜರಿದ ಅಧಿಕಾರಿಗಳು:
   - ಜ್ಯೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್
   - ಬಿ. ಡಬ್ಲ್ಯೂ.ಎಸ್.ಎಸ್.ಬಿ ಇನ್ಸ್‌ಪೆಕ್ಟರ್
   - ಸಿನಿಯರ್ ಹೆಲ್ತ್ ಇನ್ಸ್‌ಪೆಕ್ಟರ್
   - ರೆವೆನ್ಯೂ ಅಧಿಕಾರಿಗಳು
   - ಎಸ್. ಡಬ್ಲ್ಯೂ.ಡಿ ಅಧಿಕಾರಿಗಳು

2. ಹಿಂದಿನ ಸಭೆಯ ನಡುವಳಿಯನ್ನು ಸಭೆಯಲ್ಲಿ ಚರ್ಚಿಸಿದಂತೆ ಸೂಕ್ತ ಕ್ರಮವಹಿಸಲು ಸಭೆಗೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟವರಿಗೆ ತಿಳಿಸಿದರು.

3. ವಿದ್ಯುತ್ ದೀಪ ನಿರ್ವಹಣೆ ಮತ್ತು ಪೋಲೀಸ್ ಇಲಾಖೆಗೆ ಸಂಬಂಧ ಪಟ್ಟ ಅಧಿಕಾರಿಗಳು ಹಾಜರಿರುವುದಿಲ್ಲ.

4. ಪೈಪ್ ಲೈನ್ ಮೋದಲನೇ ಕ್ರಾಸ್‌ನಲ್ಲಿ ಸ್ಯಾನಿಟರಿ ಲೈನ್ ಹೊಡೆದು ಹಾಕಿ ಮುಚ್ಚಿಹಾಕಿದ್ದಾರೆ ಅದನ್ನು ತೆಗೆದು ಸರಿ ಪಡಿಸಬೇಕು ಎಂದು ಸದಸ್ಯರು ಸಭೆಯನ್ನು ಕೋರಿದರು. ನೋಡಲ್ ಅಧಿಕಾರಿಯವರು ಕೋಡಲೆ ಸರಿಪಡಿಸಬೇಕೆಂದು ಸಂಬಂಧ ಪಟ್ಟವರಿಗೆ ಸೂಚಿಸಿದರು

5. ಜಗ್ಗದೀಶ್ ರವರು ಮಾತನಾಡುತ್ತಾ ವಿನಾಯಕ ಹೋಟಲ್ ಹತ್ತಿರ ಶೌಚಾಲಯ ವ್ಯವಸ್ಥೆ ಇರುವುದಿಲ್ಲ ತುಂಬಾ ಗಲಜು ಇದೆ ನೀರು ಮುಖ್ಯ ರಸ್ತೆಗೆ ಬರುತ್ತದೆ ಆರೋಗ್ಯ ತುಂಬಾ ಅದಗೆಟ್ಟಿದೆ ಎಂದು ಸಭೆಗೆ ತಿಳಿಸಿದರು ಅಲ್ಲಿಯ ಮನೆಯವರು ಶೌಚಾಲಯ ನೀರುನ್ನು ಡ್ರೈನ್ ಗೆ ಬಿಡುತ್ತಾರೆ ಅಲ್ಲಿ 60 ಜನ ಬಾಡಿಗೆದಾರರಿದ್ದಾರೆ ಎಂದು ಸಭೇಗೆ ತಿಳಿಸಿದರು ನೋಡಲ್ ಅಧಿಕಾರಿಯವರು ಕೂಡಲೆ ವರದಿಸಲು ಕಾರ್ಯದರ್ಶಿಗೆ ಸೂಚಿಸಿದರು.

6. ಹಗ್ಗದೀಶ್ ರವರು ಮಾತನಾಡುತ್ತ ಕಟ್ಟಡ ಕೆಲಸ ರಾತ್ರಿಯ ವೇಳೆ ಮಾಡಲು ಅನುಮತಿ ನೀಡಬಾರದು ಜೆಸಿಬಿ ಕೆಲಸ ಮಾಡಿಸುತ್ತಾರೆ ಬಹಳ ಸಮಸ್ಯ ಆಗುತ್ತದೆ ಎಂದು ತಿಳಿಸಿದಾಗ ನೋಡಲ್ ಅಧಿಕಾರಿಯವರಯರು ಆರೀತಿ ಯಾವುದೆ ಅನುಮತಿ ನೀಡಿಲ್ಲ ಎಂದು ಸಭೆಗೆ ತಿಳಿಸಿದರು

7. ರೆವೆನ್ಯೂ ಅಧಿಕಾರಿಗಳು ಮಾತನಾಡುತ್ತ ಕಳೆದ ಒಂದು ವರ್ಷದಿಂದ ಕಚೇರಿಯ ವಿದ್ಯುತ್‌ಬಿಲ್ ಪಾವತಿಸದೇ ಇರುವುದರಿಂದ ಸಮಸ್ಯೆ ಆಗಿದೆ ಎಂದು ಸಭೆಗೆ ತಿಳಿಸಿದರು.

ನೋಡಲ್ ಅಧಿಕಾರಿಯವರು ಕೂಡಲೇ ಕ್ರಮ ವಹಿಸಿ ಎಂದು ವಾರ್ಡ್ ಇಂಜಿನಿರ್‌ರವರಿಗೆ ತಿಳಿಸಿದರು.

8. ಕೃಷ್ಣಕುಮಾರ್ ರವರು ಮಾತಾನಾಡುತ್ತಾ ವಿವೇಕಾನಂದ ಬ್ಲಾಕ್ ನಲ್ಲಿ ಕೂಡಲೆ ಚೇಂಬರ್ ಸರಿಪಡಿಸಬೇಕು ಎಂದು ಸಭೆಯಲ್ಲಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ತಿಳಿಸಿದರು.

9. ಜಿಯೋ ದವರು ಹಗೆದು ಸ್ವಚ್ಚತೆ ಮಾಡದೆ ಪಾಟ್ ಹೋಲ್ಸ್ ಗಳನ್ನು ಮುಚ್ಚದೆ ಇರುವುದು ಕಂಡುಬಂದಿರುತ್ತದೆ ಆದ್ದರಿಂದ ಸದರಿಯವರನ್ನು ಕೆಲಸ ಮಾಡಲು ಬಿಡಬಾರದೆಂದು ಸಭೆಯಲ್ಲಿದ್ದ ಸದಸ್ಯರು ತಿಳಿಸಿದರು.

10. ಚಂದ್ರಶೇಖರ್ ರವರು ಎ ಆರ್ ಒ ಆಫಿಸ್‌ನಲ್ಲಿ ಗುಮಾಸ್ತಾರಾಗಿರುತ್ತಾರೆ, ಸದರಿ ಯವರು ಭ್ರಷ್ಟರಲ್ಲ ಆದರೆ ಸರಿಯಾಗಿ ಕೆಲಸ ನಿರ್ವಹಿಸುವುದಿಲ್ಲ ಜನ ಸಾಮನ್ಯರಿಗೆ ತೋಂದರೆ ಕೊಡುತ್ತಾರೆ ಆದರಿಂದ ಸದರಿಯವರ ಕ್ರಮಕ್ಕೆ ಸಂಬಂಧಿಸಿದ ಅಧಿಕಾರಿಗೆ ಪತ್ರ ಬರೆಯುವಂತೆ ಸದಸ್ಯರು ಸಭೆಗೆ ತಿಳಿಸಿದರು.

11. ಕುಮಾರ್ ರವರು ಮಾತನಾಡುತ್ತಾ ಚಂದ್ರಯ್ಯ ಆರ್.ಐ ರವರು ಸಾರ್ವಜನಿಕರುಗೆ ಕೆಲಸ ಮಾಡದೆ ಸುಖಃ ಸುಮ್ಮನೆ ಅಲೆಸುತ್ತಾರೆ ಆದರಿಂದ ಸದರಿಯವರ ಕ್ರಮಕ್ಕೆ ಸಂಬಂಧಿಸಿದ ಅಧಿಕಾರಿಗೆ ಪತ್ರ ಬರೆಯುವಂತೆ ಸದಸ್ಯರು ಸಭೆಗೆ ತಿಳಿಸಿದರು.

12. ವಿವೇಕಾನಂದ ಬ್ಲಾಕ್‌ನಲ್ಲಿ ಊಳು ತೆಗೆಸಬೇಕೆಂದು ಸಭೆಗೆ ಕೋರಿದರು ಕೂಡಲೆ ಊಳು ತೆಗೆಯಲು ವಾರ್ಡ್ ಇಂಜಿನಿಯರ್ ಗೆ ಸೂಚಿಸಿದರು.

**ನೋಡಲ್ ಅಧಿಕಾರಿಗಳು**
**ವಾರ್ಡ್ ಸಂ.77,**
**ದತ್ತಾತ್ರೇಯ ದೇವಸ್ಥಾನ ವಾರ್ಡ್**

**<u>ಪ್ರತಿಯನ್ನು:-</u>**

1. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪಶ್ಚಿಮ) ರವರ ಮಾಹಿತಿಗಾಗಿ ಸಲ್ಲಿಸಿದೆ.